5

# ಸೌಲ

## ಘೋರವಾದ ಅಂತ್ಯಕ್ಕೆ ಸುಂದರವಾದ ಪ್ರಾರಂಭ

1 ಸಮುವೇಲ ಪುಸ್ತಕದಲ್ಲಿನ ಅನೇಕ ಪ್ರಮುಖ ವ್ಯಕ್ತಿಗಳಲ್ಲಿ ಬೆಂಜಾಮಿನ್ ಕುಲಕ್ಕೆ ಸೇರಿದ ಯೌವನಸ್ಥ ಒಕ್ಕಲಿಗನಿದ್ದನು. ತನ್ನ ತಂದೆಯ ಕಳೆದುಹೋದ ಕತ್ತೆಗಳನ್ನು ಹುಡುಕುವದಕ್ಕಾಗಿ ಹೋದ ಸಮಯದಲ್ಲಿ ಅವನನ್ನು ಪರಿಚಯಿಸಲಾಗಿದೆ (9:3-5). ಅವನ ಜೀವಿತದ ಪ್ರಾರಂಭದಲ್ಲಿ, ಅವನು ದೀನ ಸ್ವಭಾವದವನು ಮತ್ತು ಇತರರ ವಿಷಯದಲ್ಲಿ ಕಳಕಳಿಯುಳ್ಳವನು ಆಗಿದ್ದನು. ಕೊನೆಯ ಕೆಲವು ವರ್ಷಗ ಳಲ್ಲಿ, ಅವನು ಬಹಳ ಬದಲಾಯಿಸಿದನು. ಯಶಸ್ಸು ಪಡೆಯಲು ಅವನಿಗೆ ಬಹಳಷ್ಟು ಅವಕಾಶಗಳಿದ್ದವು, ಆದರೆ ಅವನು ವಿಫಲನಾದನು! ಈ ಕೆಳಗಿನ ಘಟನೆಯಿಂದ ಅವನ ಜೀವನವನ್ನು ವಿವರಿಸಬಹುದು.

ಧರ್ಮವನ್ನು ಗೇಲಿಮಾಡುವದಕ್ಕೂ ಮತ್ತು ದೇವದೂಷಣೆಯಿಂದ ಒಬ್ಬರನ್ನೊಬ್ಬರು ಉತ್ತೇಜಿಸುವದಕ್ಕೂ ನಾಸ್ತಿಕರ ಒಂದು ಗುಂಪು ಪ್ರತಿ ಭಾನುವಾರ ಬೆಳಗ್ಗೆ ಸೇರಿ ಬರುವ ರೂಢಿ ಇಟ್ಟುಕೊಂಡಿತ್ತು. ಬೈಬಲ್‌ಗಳನ್ನು ಸುಟ್ಟುಬಿಡುವದಕ್ಕೂ ಅವರು ಮುಂದುವರಿದರು! ಇತ್ತಿಚೆಗೆ ಅವರು ಒಬ್ಬ ಯೌವನಸ್ಥನನ್ನು ತಮ್ಮ ಭಯಂಕರವಾದ ಅನ್ಯೋನ್ಯತೆಗೆ ವಿಧಿವತ್ತಾಗಿ ಸೇರಿಸಿ ಕೊಂಡರು. ಅವರ ದೇವರಿಲ್ಲದ ಕೂಟಗಳಿಗೆ ಹಾಜರಾಗುತ್ತಿದ್ದ ಹಾಗೆ ಅವನು ತನ್ನ ಬೈಬಲನ್ನು ಬೆಂಕಿಯಲ್ಲಿ ಹಾಕಿದನು. ಮತ್ತು ಇನ್ನೆಂದು ದೇವಾಲಯದಲ್ಲಿ ಆರಾಧನೆಗೆ ಹೋ ಗುವದಿಲ್ಲವೆಂದು ವಾಗ್ದಾನ ಮಾಡಿದನು. ಸ್ವಲ್ಪ ಸಮಯದ ನಂತರ ಅವನು ಬಹಳವಾಗಿ ಅಸ್ವಸ್ಥನಾದನು. ಒಬ್ಬ ಕ್ರೈಸ್ತನು ಅವನನ್ನು ಭೇಟಿ ಮಾಡಿದಾಗ, ಬಹಳ ವ್ಯಸ್ಥನಾಗಿರುವದನ್ನು ಕಂಡನು. ಪಶ್ಚಾತಾಪಪಡುವಂತೆ ಈ ಕ್ರೈಸ್ತನು ಬೇಡಿಕೊಂಡನು. ದೇವರ ಕರುಣೆಯ ಕುರಿತು ಅವನು ಮಾತನಾಡಿದನು. ಆಗ ಆ ಯೌವನಸ್ಥನು ಹೀಗೆ ಹೇಳಿದನು, “ಕರುಣೆಯ ಕುರಿತು ನನ್ನೊಡನೆ ಯಾಕೆ ಮಾತಾಡುತ್ತಿ? ಈಗ ಬಹಳ ತಡವಾಯಿತು! ನಾನೊಂದು ಕಾಲದಲ್ಲಿ ಪ್ರಾರ್ಥಿಸುತ್ತಿದ್ದೆನು. ಈಗ ಪ್ರಾರ್ಥಿಸಲು ಬರುವದಿಲ್ಲ. ನಾನು ಪ್ರಾರ್ಥಿಸುವದಿಲ್ಲ!” ನಂತರ ತನ್ನನ್ನು ದೇವದೂಷಣೆಗೆ ಉತ್ತೇಜಿಸಿದವರನ್ನು ಶಪಿಸುತ್ತಾ ಅವನು ತೀರಿಹೋದನು. ಅವನು ಸಾಯುವಾಗ ಅವನ ಕೊನೆಯ ಮಾತುಗಳು: “ನನ್ನ ಬೈಬಲ್! ಓ, ನನ್ನ ಬೈಬಲ್!”

ಆ ಯೌವನಸ್ಥನ ಮತ್ತು ಅರಸನಾದ ಸೌಲನ, ಆಪತ್ತು ದೇವದ್ರೋಹವಾಗಿತ್ತು. ಧರ್ಮಶಾಸ್ತ್ರದಲ್ಲಿ ದೇವದ್ರೋಹವು ಅಪಾಯಕಾರಿಯೆಂದು ಚಿತ್ರಿಸಲಾಗಿದೆ (ಹೋಶೇಯ 4:16; ಯೇಶಾಯ 1:4; ಪ್ರಕಟನೆ 2:4; 1 ತಿಮೊಥೆ 6:10, 21; 2 ತಿಮೊಥೆ 4:4). ರಕ್ಷಣೆಯ ಅನುಭವದಿಂದ ಜಾರುವದನ್ನು ನಾಲ್ಕು ಪುಸ್ತಕಗಳು ಉದ್ದೇಶಿಸಿವೆ:

> ಬೈಬಲಿನಲ್ಲಿ ಬೇರೆ ಯಾವ ಪುಸ್ತಕಕ್ಕಿಂತಲೂ ಯೆರೆಮೀಯನು “ಹಿಂಜರಿ ಯುವದು” ಎಂಬ ಪದವನ್ನು ಅನೇಕಬಾರಿ ಉಪಯೋಗಿಸಿದ್ದಾನೆ.
>
> “ಹಿಂಜರಿಯುವವರ ಸುವಾರ್ತೆ” ಎಂದು ಹೋಶೇಯನ ಪುಸ್ತಕವನ್ನು ಕೆಲವರು ಕರೆಯುತ್ತಾರೆ.
>
> ಗಲಾತ್ಯದವರಿಗೆ ಬರೆದ ಪತ್ರಿಕೆಯು ತನ್ನ ಚಂಚಲತೆಗೆ ಹೆಸರುಗೊಂಡ ಸಭೆಯನ್ನುದ್ದೇಶಿಸಿ ಬರೆಯಲಾಗಿದೆ (ಗಲಾತ್ಯ 1:6; 5:7).
>
> ಕ್ರಿಸ್ತನಲ್ಲಿನ ನಂಬಿಕೆಯನ್ನು ಬಿಟ್ಟುಬಿಡುವ ಶೋಧನೆಯಲ್ಲಿ

ಕಷ್ಟಪಡುತ್ತಿದ್ದ ಭಕ್ತರ ಗುಂಪನ್ನುದ್ದೇಶಿಸಿ ಇಬ್ರಿಯರಿಗೆ
ಬರೆದ ಪತ್ರಿಕೆಯನ್ನು ಬರೆಯಲಾಗಿದೆ.

ಹಳೆ ಒಡಂಬಡಿಕೆಯಲ್ಲಿ ಸೌಲನು ದೇವದ್ರೋಹದ ಸ್ಪಷ್ಟವಾದ ಉದಾಹರಣೆಯಾಗಿದ್ದಾನೆ. ತನ್ನ ಬಲವಾಗಿರಬೇಕಾದ ಸಂಗತಿಯಲ್ಲಿ ಅವನು ಬಲಹೀನನಾಗಿ ತೋರಿಬಂದನು (15:17). ಅವನ ದೀನತೆಯ ಗುಣದಿಂದಾಗಿ ಅವನು ಆಯ್ಕೆಯಾದನು. ಆದರೆ ಅರಸನ ಸ್ಥಾನವು ಅವನ ದೀನತೆಯನ್ನು ಅಹಂಕಾರಕ್ಕೆ ಬದಲಾಯಿಸಿತು ಮತ್ತು ವ್ಯಸನಕರವಾದ ನಾಶನಕ್ಕೆ ನಡೆಸಿತು. ಇಂಥ ಆಪತ್ತು ಗಮನಸೆಳೆಯುವದು ಯೋಗ್ಯವೇ, ಯಾಕೆಂದರೆ ಭಕ್ತಿಯ ಉತ್ತುಂಗದಿಂದ ಒಬ್ಬ ಭಕ್ತನು ನಾಸ್ತಿಕತೆಯ ತಳಕ್ಕೆ ಬಿದ್ದನು!

## ಸೌಲನ ಇತಿಹಾಸ: ಆನಂದಕರವಾದ ಪ್ರಾರಂಭ

ಕೀಷನ ಮಗನಾದ ಸೌಲ, ಉದಯವಾದದ್ದನ್ನು ಇತಿಹಾಸ ವಿವರಿಸುತ್ತದೆ. ತಂದೆಯ ಆಜ್ಞೆಗಳನ್ನು ಪಾಲಿಸುವ ಒಬ್ಬ ವಿಧೇಯ ಮಗನಾಗಿ, ಅವನು 9:2ರಲ್ಲಿ ಪರಿಚಯಿಸಲ್ಪಟ್ಟಿದ್ದಾನೆ. ಕತ್ತೆಗಳಿಗಾಗಿ ಅವನ ಹುಡುಕಾಟ ವ್ಯರ್ಥವಾಯಿತು. ಅವನು ಕೊನೆಗೆ ಸಮುವೇಲನ ಬಳಿಗೆ ಸಹಾಯಕ್ಕಾಗಿ ಬಂದನು. ಸೌಲನೊಂದಿಗೆ ಸಮುವೇಲನು ಮಾತನಾಡುವಾಗ, ಇಸ್ರಾಯೇಲು ಬಯಸಿದ ಅರಸನು ಸೌಲನೇ ಎಂದು ಸ್ಪಷ್ಟವಾಯಿತು. ಸೌಲನು ಅದನ್ನು ನಂಬಲು ಸಿದ್ಧನಿರಲಿಲ್ಲ (9:21). ಮರುದಿನ ಸೌಲನು, ತನ್ನ ಮನೆಗೆ ತೆರಳಲು ಸಿದ್ಧನಾದಾಗ, ಅವನಿಗೆ "ಹೊಸ ಹೃದಯ" ಕೊಡಲ್ಪಟ್ಟಿತು (10:9); ಅವನು ಬೇರೊಬ್ಬ ವ್ಯಕ್ತಿಯಾದನು. ದೇವರು ಅವನನ್ನು ಆಯ್ಕೆ ಮಾಡಿದ್ದಾನೆಂದು ದೃಢಪಡಿಸುವದಕ್ಕೆ ಮೂರು ಚಿಹ್ನೆಗಳನ್ನು ಸಮುವೇಲನು ಸೌಲನಿಗೆ ಅವನು ಹೊರಡುವ ಸಮಯದಲ್ಲಿ ಹೇಳಿದನು. ಅವನ ಕತ್ತೆಗಳು ಸಿಕ್ಕುವವು (10:2); ಆರಾಧನೆಗೆ ಹೋಗುತ್ತಿರುವ ಮೂರು ಜನರಿಂದ ಅವನಿಗೆ ಕಾಣಿಕೆ ದೊರಕುವದು (10:4); ಮತ್ತು ಸೌಲನು ಪ್ರವಾದಿಗಳ ಗುಂಪನ್ನು ಸೇರಿಕೊಳ್ಳುವನು (10:6). ಈ ಭರವಸೆಯ ಮಾತುಗಳಿದ್ದರೂ ಸೌಲನು ತಾನು ಇಸ್ರಾಯೇಲಿನ ಅರಸನೆಂದು ಒಪ್ಪಿಕೊಳ್ಳಲು ಹಿಂಜರಿದನು (10:16).

ಮಿಚ್ಪದಲ್ಲಿನ ಕೂಟವು ಸಾರ್ವಜನಿಕವಾಗಿ ತಮ್ಮ ಅರಸನನ್ನು ಆಯ್ಕೆಮಾಡಿ ಸೌಲನನ್ನು ಪ್ರಕಟಿಸಿತು (10:17-27). ವಿರೋಧವಿಲ್ಲ ಅಭ್ಯರ್ಥಿಯಾಗಿ ಸೌಲನು ಕಿರೀಟವನ್ನು ಪಡೆಯುವದಕ್ಕೆ ತಾನೇ ಸ್ವತಃ ಮುಂದೆ ಬರಲಿಲ್ಲ. ಅವನ ಮರ್ಯಾದೆ ಮತ್ತು ದೀನತೆ ಬಹು ಸುಂದರವಾಗಿ ವ್ಯಕ್ತವಾಯಿತು (10:22). ಅವನು ನೇಮಿಸಲ್ಪಟ್ಟಾಗ ಬಂದ ಟೀಕೆಗೆ ಅಭಿನಂದನೀಯವಾದ ರೀತಿಯಲ್ಲಿ ಅವನು ಪ್ರತಿಕ್ರಿಯೆ ವ್ಯಕ್ತಪಡಿಸಿದನು (10:27ಬಿ). ಅವನು ಪ್ರತಿಕಾರವನ್ನು ಬಯಸಲಿಲ್ಲ ಮತ್ತು ಸೇಡು ತೀರಿಸುವ ವ್ಯಕ್ತಿ ಅವನಾಗಿರಲಿಲ್ಲ. ಉತ್ತಮವಾಗಿ ತನ್ನನ್ನು ನಿಯಂತ್ರಿಸಿಕೊಂಡನು. ವಾಕ್ಯಭಾಗವು ಹೀಗೆ ಹೇಳುತ್ತದೆ, "ಆದರೂ ಅವನು ಸುಮ್ಮನಿದ್ದನು." ಅವರ ಮಾತುಗಳು ಹೇಳಲ್ಪಟ್ಟಿಲ್ಲವೋ ಎಂಬಂತೆ ಅವನು ತಿಳಿದುಕೊಂಡನು.

ಸೌಲನು ಅರಸನಾಗಿ ನೇಮಿಸಲ್ಪಟ್ಟ ಮೇಲೆಯೂ ದೀನತೆಯಿಂದ ನಡಕೊಂಡನು - ಅವನು ಉಳುವ ಕೆಲಸಕ್ಕೆ ತನ್ನ ಮನೆಗೆ ಹಿಂತಿರುಗಿದನು! (10:26; 11:5). ಒಬ್ಬ ಯೌವನಸ್ಥನಾಗಿ ಅವನಲ್ಲಿ ಪ್ರಶಂಸನಿಯವಾದ ಆತ್ಮವಿತ್ತು. ಗರ್ವವನ್ನು ನಿಯಂತ್ರಿಸಿದನು, ಪ್ರತಿಕಾರದ ಆಶೆಯನ್ನು ಹತ್ತಿಕ್ಕಿದನು ಮತ್ತು ಆಡಂಬರ ಮತ್ತು ಮಹಿಮೆಯ ಅಶೆಯನ್ನು ಜಯಿಸಿದನು. ಅವನು ಶ್ಲಾಘನೀಯನಾಗಿದ್ದನು!

ಹೊಸದಾಗಿ ನೇಮಿಸಲ್ಪಟ್ಟ ಅರಸನು ಯಾಬೇಷ್ - ಗಿಲ್ಯಾದಿನಲ್ಲಿ ಕೆಲವು ಘಟನೆಗಳಿಂದ ಪರೀಕ್ಷಿಸಲ್ಪಟ್ಟನು (11:1-15). ಯಪ್ತಾಹನು ಅಮ್ಮೋನಿಯರನ್ನು ಸೆದೆಬಡಿದು ಸುಮಾರು ನೂರು

ವರ್ಷಗಳು ಕಳೆದಿದ್ದವು. ಈಗ ಅವರು ಯಾಬೇಷನ್ನು ಸುತ್ತುವರಿದಿದ್ದರು. ನಾಗರೀಕರು ಯುದ್ಧದಲ್ಲಿ ಉಪಯೋಗವಿಲ್ಲದವರಾಗುವಂತೆ ಮಾಡುವ ಕೊನೆಯ ಎಚ್ಚರಿಕೆ ಕೊಡಲ್ಪಟ್ಟಿತ್ತು (11:2). ನ್ಯಾಯಸ್ಥಾಪಕರ 20; 21 ಕಾಲದಲ್ಲಿನ ಅಂತರ್ಯುದ್ಧದ ಸಮಯದಲ್ಲಿನ ರಕ್ತ-ಸಂಬಂಧಗಳ ಕಾರಣದಿಂದ ಹತಾಶರಾಗಿ ಅವರು ಗಿಬೆಯಕ್ಕೆ ತೆರಳಿದರು. ಸೌಲನು ಈ ವರ್ತಮಾನವನ್ನು ಕೇಳಿದಾಗ ತನ್ನ ಸೇನೆಯೊಂದಿಗೆ ಹೋಗಿ ಅಮ್ಮೋನಿಯರನ್ನು ಸಂಪೂರ್ಣವಾಗಿ ಸೋಲಿಸಿದನು (11:6-11). ಅಧಿಕಾರದಲ್ಲಿ ಸೌಲನ ಉನ್ನತಿಯು ಉತ್ತಮವಾಗಿ ಪ್ರಾರಂಭವಾಯಿತು, ಮತ್ತು ಇಸ್ರಾಯೇಲಿನಲ್ಲಿ ಹರ್ಷವು ಹರಿಯಿತು (11:15).

## ಸೌಲನ ಇತಿಹಾಸ: ದುಃಖಕರವಾದ ಪತನ

ಅವನು ದೇವರಿಗೆ ಭಕ್ತಿಯಿಂದ ನಡೆಕೊಂಡದ್ದರಿಂದ, ತನ್ನ ಮೊದಲ ವರ್ಷ ಗಳಲ್ಲಿ ದೇವ ಜನರ ಅರಸನಾಗಿ ಸೌಲನು ಯಶಸ್ಸನ್ನು ಪಡೆದನು (11:13). ಕೆಲವು ವರ್ಷಗಳ ತರುವಾಯ ಅವನ ಹೃದಯವು ಬದಲಾಗುವದಕ್ಕೆ ಪ್ರಾರಂಭಿಸಿತು. ಬದಲಾವಣೆಯೊಂದಿಗೆ ಇಸ್ರಾಯೇಲಿನಲ್ಲಿ ಬದಲಾವಣೆ ಬಂದಿತು. ಸೌಲನ ಪತನವು 1 ಸಮುವೇಲ ಪುಸ್ತಕದಲ್ಲಿ ಸ್ಪಷ್ಟವಾಗಿ ಚಿತ್ರಿಸಲ್ಪಟ್ಟಿದೆ.

ಫಿಲಿಷ್ಟಿಯರು ಇಸ್ರಾಯೇಲನ್ನು ದಾಳಿ ಮಾಡಿದಾಗ ನಾಶನದ ಮೊದಲ ಚಿಹ್ನೆಗಳು ಕಾಣಿಸಿಕೊಂಡವು (13:6). ಭಯದ ಆತ್ಮವು ರಾಷ್ಟ್ರದ ಮೇಲೆ ನೆಲೆಗೊಂಡಿತ್ತು, ಮತ್ತು ವೈರಿಯನ್ನು ಎದುರಿಸಲು, ರಾಜನು ಒಂದು ಸೇನೆಯನ್ನು ಕೂಡಿಸಿದ್ದನು. ಸಮುವೇಲನು ಬಂದು ಯಜ್ಞವನ್ನು ಸಮರ್ಪಿಸಬೇಕೆಂದು ಸೌಲನು ಕಾಯುತ್ತಿದ್ದನು. ಆದರೆ ಪ್ರವಾದಿಯು ಬರಲಿಲ್ಲ. ದಿನಗಳು ಕಳೆದಂತೆ ಸೈನಿಕರು ಬಿಟ್ಟುಹೋಗಿ ಸೇನೆಯಲ್ಲಿನ ಸಂಖ್ಯೆ ಕಡಿಮೆಯಾಯಿತು (13:7, 8). ಸೌಲನು ಗಾಬರಿಯಿಂದ ಯಜ್ಞವನ್ನು ತಾನೇ ಸಮರ್ಪಿಸಿದನು (13:9). ಸಮುವೇಲನು ಅರಸನನ್ನು ಕಠಿಣವಾಗಿ ಗದರಿಸಿದನು. ಆದರೆ ಅವನು ಪ್ರವಾದಿಯ ಮಾತಿಗೆ ಹೆಚ್ಚು ಗಮನಕೊಡಲಿಲ್ಲ (13:10, 11, 13, 14). ಇದು ಸೌಲನ ಪತನಕ್ಕೆ ಕಾರಣವಾಯಿತು.

ಸೌಲನ ನಂತರದ ನಾಶನದ ಸೂಚನೆಯು 15:9ರಲ್ಲಿದೆ:

> ಆದರೆ ಸೌಲನು ಇಸ್ರಾಯೇಲ್ಯರೂ ಆಗಾಗನನ್ನೂ ಮೇಲ್ತರದ ಕುರಿ ದನಗಳನ್ನೂ ಕುರಿಮರಿಗಳನ್ನೂ ಕೊಬ್ಬಿದ ಪಶುಗಳನ್ನೂ ಶ್ರೇಷ್ಠವಾದ ಎಲ್ಲಾ ಪದಾರ್ಥಗಳನ್ನೂ ನಾಶ ಮಾಡ ಮನಸ್ಸಿಲ್ಲದೆ ಉಳಿಸಿ ಪ್ರಯೋಜನವಿಲ್ಲದಂಥ ಹೀನವಾದವುಗಳನೆಲ್ಲಾ ನಾಶಮಾಡಿಬಿಟ್ಟರು.

ಕೊನೆಗೆ ಅವನು ದೇವರಿಂದ ತಿರಸ್ಕರಿಸಲ್ಪಟ್ಟನು. ಫಿಲಿಷ್ಟಿಯರ ದಾಳಿಯ ಘಟನೆಯು ನಡೆದು ಅನೇಕ ವರ್ಷಗಳು ಗತಿಸಿದವು. ಮತ್ತು ಈ ವರ್ಷಗಳಲ್ಲಿ ಸೌಲನಿಗೆ ಉತ್ತಮವಾದ ಯಶಸ್ಸು ದೊರಕಿತು. ಅವನ ಸೇನಾಬಲವು ಹೆಚ್ಚಿತು ಮತ್ತು ಅವನು ಅನೇಕ ಯುದ್ಧಗಳನ್ನು ಜಯಿಸಿದನು. ಅವನ ಮನೆಯಲ್ಲಿ ಸಾಕಾಷ್ಟು ಐಶ್ವರ್ಯವಿತ್ತು, ಮತ್ತು ಅವನ ಚಿತ್ತವೇ ನಿಯಮವಾಯಿತು (14:47, 48). ಆದರೆ ಸೌಲನು ನಿಕೃಷ್ಟವಾಗಿ ವಿಫಲನಾದನು 15:9. ಅಮಾಲೇಕನನ್ನು ನಾಶಮಾಡುವದಕ್ಕೆ ಅವನು ನಿರಾಕರಿಸಿದಾಗ, ಧರ್ಮಶಾಸ್ತ್ರದಲ್ಲಿ ನಮೂದಿಸಿದ ಅತಿ ಕಠಿಣವಾದ ಗದರಿಕೆಗೆ ಒಳಗಾದನು. ದೇವರು ಸೌಲನಿಗೆ ಎಲ್ಲವನ್ನೂ ಮಾಡಿದಗಲೂ, ದುರಾಶೆಯು ಅವನನ್ನು ಆಳಿತು ಮತ್ತು ಅವನ ಜೀವನವನ್ನು ನಾಶ ಮಾಡಿತು. ದೇವರ ಕಡೆಗೆ ಅವನಿಗಿದ್ದ ಪ್ರತಿಭಟನಾ ಸ್ವಭಾವವೇ ಅವನನ್ನು ನಿಯಂತ್ರಿಸಿತು (15:23).

ತನ್ನ ಪಾಪದ ಕುರಿತು ಸೌಲನ ಹೇಳಿಕೆಗಳು ಯಥಾರ್ಥವಾಗಿರಲಿಲ್ಲ. ಯಾಕೆಂದರೆ ತಾನು ನಿಯಂತ್ರಣದಲ್ಲಿರುವಂತೆ ತನ್ನ ಆಶೆಗಳಿಗೆ ಮುಖವಾಡವನ್ನು ಹಾಕಿದನು (15:25-30). ಜನ

ರೊಂದಿಗೆ ಒಳ್ಳೆಯವನಾಗಿರುವದಕ್ಕೆ ಬಯಸಿದನು. ಅದಕ್ಕಿದ್ದ ಒಂದೇ ಮಾರ್ಗ - ಸಮುವೇಲನ ಸ್ನೇಹಿತನೆಂದು ತೋರ್ಪಡಿಸುವದು. ಅವನ ದೀನತೆಯು ಅಹಂಕಾರದಿಂದ ತುಂಬಿದ ಸ್ವಾರ್ಥವಾಗಿತ್ತು! ಅದರ ಪರಿಣಾಮ ದುಃಖಕರವಾಗಿತ್ತು!

ದೇವರು ಸಮುವೇಲನಿಗೆ ಹೀಗೆ ಹೇಳಿದನು:

> ಯೆಹೋವನು ಸಮುವೇಲನಿಗೆ - ನಾನು ಸೌಲನನ್ನು ಇಸ್ರಾಯೇಲ್ಯರ ಅರಸನಾಗಿರುವದಕ್ಕೆ ಅಯೋಗ್ಯನೆಂದು ತಳ್ಳಿಬಿಟ್ಟೆನಲ್ಲಾ; ನೀನು ಅವನಿಗೋಸ್ಕರ ಎಷ್ಟರವರೆಗೆ ದುಃಖಿಸುತ್ತಿರುವಿ? ಕೊಂಬನ್ನು ಎಣ್ಣೆಯಿಂದ ತುಂಬಿಸಿಕೊಂಡು ಬಾ; ನಾನು ನಿನ್ನನ್ನು ಬೇತ್ಲಹೇಮಿನವನಾದ ಇಷಯನ ಬಳಿಗೆ ಕಳುಹಿಸುತ್ತೇನೆ; ಅವನ ಮಕ್ಕಳಲ್ಲೊಬ್ಬನನ್ನು ಅರಸನನ್ನಾಗಿ ಆರಿಸಿಕೊಂಡಿದ್ದೇನೆ ಎಂದು ಹೇಳಿ ದನು (16:1).

ಸರ್ವಶಕ್ತನು ತಾನು ಅನುವು ಮಾಡುವ ಕೆಲವು ಸಂಗತಿಗಳನ್ನು ಮಾಡುತ್ತೇನೆಂದು, ಕಠಿಣ ವಾಗಿ ಇಬ್ರಿಯ ಮಾತುಗಳಲ್ಲಿ ತಿಳಿಸುತ್ತಾನೆ. ಇದು ಸೌಲನೊಂದಿಗೆ ಆಯಿತು (cf. ಯೋಬ 1:6-12; ಲೂಕ 22:31). ದೇವರನ್ನು ತಿರಸ್ಕರಿಸಿದ ಸೌಲನು ಪ್ರತಿಭಟನೆಯ ಮಾರ್ಗವನ್ನು ಆಯ್ಕೆ ಮಾಡಿದನು. ಈಗ ಅವನಿಗೆ ಮಾರ್ಗದರ್ಶನ ಮಾಡಲು ಮತ್ತು ಅವನ ನಿರ್ಧಾರಗಳನ್ನು ನಿಯಂತ್ರಿಸಲು ಅವನ ಬಳಿ ದುಷ್ಟತನವಿತ್ತು.

ಸೌಲನು ತನ್ನ ದುಃಸ್ಥಿತಿಯನ್ನು ಅರಿತುಕೊಂಡನು ಮತ್ತು ತನ್ನ ಅವಿಧೇಯತ್ವವನ್ನು ಸರಿಪಡಿಸುವಂತೆ ಒಳ್ಳೇ ಕಾರ್ಯಗಳನ್ನು ಮಾಡಲು ದೇವರ ಸಹಾಯವನ್ನು ನವೀಕರಿಸಲು ಪ್ರಯತ್ನಿಸಿದನು. ದೇವರ ಶಾಪವನ್ನು ಶಮಿಸಲು ಸೌಲನು ಎರಡು ಸಂಗತಿಗಳನ್ನು ಮಾಡಿದನು. ಗಿಬ್ಯೋನ್ಯರನ್ನು ನಾಶ ಮಾಡಲು ಪ್ರಯತ್ನಿಸಿದನು (cf. 2 ಸಮುವೇಲ 21:2) ಮತ್ತು ಆತ್ಮಿಕ ವಿಷಯಗಳಲ್ಲಿ ನಿಯಮಗಳನ್ನು ಹೊರಡಿಸಿದನು (28:9). ಆದರೆ ಸೌಲನ ಅರಸೊತ್ತಿಗೆ ಅಂತ್ಯವಾಯಿತು. ಅವನ ಹೃದಯದ ಕೊಳೆತುಹೋದ ಸ್ಥಿತಿಯು ಅವನ ಸುತ್ತಲೂ ಹಬ್ಬಿ ನಾಶ ಮಾಡಿತು. ಇತರ ಅರಸರಂತೆ ಅವನು ವೈಭವದ ರುಮಾಲನ್ನು ಸುತ್ತಿಕೊಂಡಿದ್ದನು (2 ಸಮುವೇಲ 1:10); ತನ್ನ ಅಸ್ಥಾನದ ಐಶ್ವರ್ಯವನ್ನು ಹೆಚ್ಚಿಸಿದನು (2 ಸಮುವೇಲ 1:24); ಬಾಳಿನ ಆರಾಧನೆಯೊಟ್ಟಿಗೆ ಯೆಹೋವನ ಆರಾಧನೆಯನ್ನು ಬೆರೆಸಿ ತನ್ನ ಮಕ್ಕಳಿಗೆ ಹೆಸರಿಟ್ಟನು. ಮತ್ತು ಉಪಪತ್ನಿಯರನ್ನು ತೆಗೆದುಕೊಂಡನು.

ಸೌಲನ ಅವನತಿಯು ಅವನಲ್ಲಿ ಖಿನ್ನತೆಯನ್ನು ಪದೇಪದೇ ಮರುಕಳಿಸುತ್ತಿತ್ತು. ಸಂಗೀತವನ್ನು ಬಾರಿಸುವ (16:19) ಮೂಲಕ ಅರಸನನ್ನು ಶಮನಗೊಳಿಸಲು ಒಬ್ಬ ಕುರಿಮೇಯಿಸುವ ಹುಡುಗನನ್ನು ಕರಕೊಂಡು ಬಂದರು. ಆದರೆ ಯೌವನಸ್ಥನಾದ ದಾವೀದನ ಪ್ರಸನ್ನತೆಯು ಸೌಲನ ಹೃದಯದಲ್ಲಿ ವಿಷವನ್ನು ಹುಟ್ಟಿಸಿತು. ಗೋಲ್ಯಾತನ ಮರಣದ ನಂತರ, ಹೊಟ್ಟೇಕಿಚ್ಚು ಮತ್ತು ದ್ವೇಷ ಸೌಲನ ಆಲೋಚನೆಗಳನ್ನು ತುಂಬಿಕೊಂಡವು. ಹುಚ್ಚು ಕೋಪದಲ್ಲಿ ದಾವೀದನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದನು. ಮೊದಲಿಗೆ ಮೋಸವನ್ನು ಉಪಯೋಗಿಸಿದನು. ಫಿಲಿಷ್ಟಿಯರು ಈ ಕೆಲಸವನ್ನು ಮಾಡುವರೆಂದು ನೆನೆಸಿದನು (18:21). ಕೊನೆಯಲ್ಲಿ, ದಾವೀದನ ವಿರುದ್ಧ ಸಾರ್ವಜನಿಕವಾಗಿ ಕ್ರಮವನ್ನು ತೆಗೆದುಕೊಂಡನು (19:1). ದಾವೀದನ ವಿರುದ್ಧ ಸೌಲನಿಗಿದ್ದ ಕಹಿಯಾದ ದ್ವೇಷವನ್ನು ಯಾವದೂ ತಡೆಯಲಿಲ್ಲ. ಎರಡು ಬಾರಿ ಅರಸನ ಪ್ರಾಣವು ಉಳಿಯಿತು. ಆದರೆ ದಾವೀದನ ಕ್ಷಮಾಪಣೆಯು ಸೌಲನ ಕಠಿಣ ಹೃದಯದ ಮೇಲೆ ಪ್ರಭಾವ ಬೀರಲಿಲ್ಲ. ಸೌಲನೊಬ್ಬ ದ್ವೇಷದಿಂದ ತುಂಬಿದ ಮನುಷ್ಯನಾಗಿ ಕ್ಷಯಿಸಿಹೋದನು. ಸೌಲನ ದೀನತೆಯು ಕರಗಿಹೋಯಿತು. ಮೊದಲ ವರ್ಷಗಳ ಆನಂದವನ್ನು ನಂತರದ ವರ್ಷಗಳ ಕತ್ತಲು ಅವರಿಸಿಕೊಂಡಿತು.

ಎಂದೋರಿನಲ್ಲಿ ಆ ಘಟನೆಯು ನಡೆಯುವ ಸಮಯದಲ್ಲಿ ಸೌಲನ ಅಳಿವು ಸಂಪೂರ್ಣವಾಗುವದರಲ್ಲಿತ್ತು (28:3-25). ಗೋಲ್ಯಾತನು ಕೊಲ್ಲಲ್ಪಟ್ಟು ಅನೇಕ ವರ್ಷಗಳು ಗತಿಸಿದ್ದವು. ಸೌಲನಿಂದ ತಪ್ಪಿಸಿಕೊಂಡು ನಿರಾಶ್ರಿತನಾಗಿ ದಾವೀದನು ಅಲೆದಾಡುತ್ತಾ ಅನೇಕ ವರ್ಷಗಳು ಗತಿಸಿದ್ದವು. ಮತ್ತೊಮ್ಮೆ ಸೌಲನ ಹಳೆ ವೈರಿಗಳಾದ ಫಿಲಿಷ್ಟಿಯರಲ್ಲಿ ವಿಚಾರಿಸಿದರು, ಇಸ್ರಾಯೇಲಿನಲ್ಲಿ ಹೊಸದಾಗಿ ದಾಳಿ ಮಾಡುವದಕ್ಕೆ ಸಿದ್ಧರಾಗುತ್ತಿದ್ದರು. ಎಸ್ಡ್ರಲೋನ್ ಬಯಲಿನ ಮೂಲಕ ಹಾದು ಹೋಗುವ ವ್ಯಾಪಾರದ ಮಹಾ ಮಾರ್ಗವು ಫಿಲಿಷ್ಟಿಯರ ಗುರಿಯಾಗಿತ್ತು. ಸೌಲನು ತನ್ನ ಸೇನೆಯನ್ನು ಗಿಲ್ಬೋವಿನ ಬೆಟ್ಟಗಳಲ್ಲಿ ಇಳಿಸಿದನು (28:5; cf. ಯೋಬ 23:8). ಆದರೆ ಅವನ ಧೈರ್ಯವು ಸ್ಥಗಿತವಾಗಿತ್ತು. ಅವನಿಗೆ ಸಹಾಯವು ಬೇಕಿತ್ತು. ಆದರೆ ದೇವರು ಮೌನವಾಗಿದ್ದನು. ಸತ್ತವರಲ್ಲಿ ವಿಚಾರಿಸಿ ಹೇಳುವ ಸ್ತ್ರೀಯ ಬಳಿಗೆ ಅರಸನು ಸಲಹೆ ಕೇಳುವದಕ್ಕೆ ಹೋದನು (28:6, 7), ಆದರೆ ಸಮುವೇಲನು ಕಾಣಿಸಿಕೊಂಡಾಗ ಅವಳು ಗಾಬರಿಯಾದಳು (28:12) ಆಗ ಆ ಮಾಧ್ಯಮದ ಮೋಸವು ಹೊರಬಿತ್ತು. ಮುದಿ ಪ್ರವಾದಿ ಸಮುವೇಲನು ಸೌಲನಿಗೆ ಯಾವ ನಿರೀಕ್ಷೆಯಾಗಲಿ ಸಮಾಧಾನವನ್ನಾಗಲಿ ಕೊಡಲಿಲ್ಲ. ಯಾಕೆಂದರೆ ಮುಂಬರುವ ನಾಶನವನ್ನು ಯಾರೂ ತಪ್ಪಿಸಲು ಸಾಧ್ಯವಿರಲಿಲ್ಲ (28:16). ಸಮುವೇಲನ ಸಂದೇಶವನ್ನು ಕೇಳಿದ ಕೂಡಲೇ ಸೌಲನು ಬಿದ್ದು ಬಿಟ್ಟನು (28:20). ಆ ಕಣಿ ಹೇಳುವವಳ ಮನೆಯ ಮಣ್ಣಿನ ನೆಲದ ಮೇಲೆ ಬಿದ್ದು ಕೊಂಡಿದ್ದ ಸೌಲನ ಮನಸ್ಸಿನಲ್ಲಿ ಯಾವ ಆಲೋಚನೆಗಳು ಹಾದು ಹೋಗುತ್ತಿರಬಹುದೆಂದು ನೀವು ನೆನೆಸಬಹುದು. ಬಹುಶಃ ತಾನು ಯೆಹೋವನ ವಿರುದ್ಧ ಮಾಡಿದ ಪ್ರತಿಭಟನೆಯ ಪರಿಣಾಮವಾಗಿ ಹಂತ ಹಂತವಾಗಿ ಆದ ತನ್ನ ಅಳಿವಿನ ಕುರಿತು ಮೆಲಕು ಹಾಕುತ್ತಿರಬಹುದು.

ಗಿಲ್ಬೋವಿನ ಬೆಟ್ಟದ ತಪ್ಪಲಲ್ಲಿ ಸೌಲನ ಅಳಿವು ಖಚಿತವಾಯಿತು (31:1-6). ಎರಡೂ ಸೇನೆಗಳು ಯುದ್ಧಕ್ಕೆ ಸನ್ನದ್ಧರಾಗಿ ನಿಂತರು. ಯುದ್ಧವು ಪ್ರಾರಂಭವಾಯಿತು. ಸೌಲನ ಸೇನೆಯು ಸೋತುಹೋಯಿತು. ಬೆಟ್ಟವು ರಕ್ತದಿಂದ ಮುಳುಗಿಹೋಯಿತು. ಸೌಲನು ಗಾಯಗೊಂಡಾಗ, ಸೆರೆಹೋಗುವ ಬದಲು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದನು. ಆದರೆ ಅವನ ಪ್ರಯತ್ನವು ವಿಫಲವಾಯಿತು. ಅವನು ಅಮಾಲೇಕ್ಯನೊಬ್ಬನಿಂದ ಹತನಾದನು (2 ಸಮುವೇಲ 1:1-10). ಯಾಬೇಶ್ ಗಿಲ್ಯಾದಿನರು ಸೌಲನ ಮತ್ತು ಅವನ ಮಕ್ಕಳ ಶವಗಳನ್ನು ತೆಗೆದುಕೊಂಡು ಬಂದು ಕ್ರಮಾನುಸಾರವಾಗಿ ಶವಸಂಸ್ಕಾರ ಮಾಡಿದರು (31:13).

## ಸೌಲನ ಇತಿಹಾಸ: ದುರ್ಬಲ ಪ್ರಭಾವ

ಸ್ವಾರ್ಥತೆ - ಅವನ ದುಃಖಕರವಾದ ಅಂತ್ಯಕ್ಕೆ ಕಾರಣವಾಯಿತೆಂದು ಸೌಲನ ಜೀವನ ಚರಿತ್ರೆಯಲ್ಲಿ ಕಾಣುತ್ತೇವೆ. ದೇವರ ಮೇಲೆ ದೃಷ್ಟಿಯಿಡುವದನ್ನು ಬಿಟ್ಟು ತನ್ನ ಮೇಲೆ ಇಟ್ಟನು. ಸ್ವಾರ್ಥತೆಯು ಸೌಲ ಪತನಕ್ಕೆ ಕಾರಣವಾಗಿ ಅಂತ್ಯದಲ್ಲಿ ಅವನನ್ನು ಕೊಂದುಬಿಟ್ಟಿತು (11:13 ರೊಂದಿಗೆ ವಿಭಿನ್ನತೆಯನ್ನು ಗಮನಿಸಿರಿ 15:12; 18:8; 15:7).

ಸ್ವಾರ್ಥವು ಆಳುವದಕ್ಕೆ ಪ್ರಾರಂಭ ಮಾಡಿದಾಗ, ಸೌಲನು ತನ್ನ ಹೆಮ್ಮೆ, ಪ್ರತಿಕಾರದ ಮನೋಭಾವನೆ, ಮತ್ತು ಹಣದಾಶೆಯ ಮೇಲಿನ ನಿಯಂತ್ರಣವನ್ನು ಕಳೆದುಕೊಂಡನು. ಸ್ವಾರ್ಥ ತನ್ನನ್ನು ಆಳುವದಕ್ಕೆ ಅವಕಾಶಮಾಡಿಕೊಟ್ಟಾಗ, ಅವನು ಚಂಚಲನೂ ಮತ್ತು ದುಃಖಿತನೂ ಆದನು. ಒಬ್ಬ ಕೊಲೆಗಾರನ ಹೃದಯವನ್ನು ಮೋಸಗೊಳಿಸಿದ ಮತ್ತು ಭಯಂಕರ ಮರಣವನ್ನನುಭವಿಸಿದನು (ಯೇಷಾಯ 56:11; ಯೆರೆಮೀಯ 17:11).

ಗಿಲ್ಗಾಲಿನಲ್ಲಿ ಯಜ್ಞವನ್ನರ್ಪಿಸಲು ಸೌಲನನ್ನು ಸ್ವಾರ್ಥವು ಒತ್ತಾಯಿಸಿತು (13:9). ಅವನು ದೇವರ ಸೇವೆ ಮಾಡಲು ನಿರಾಕರಿಸಿದನು ಮತ್ತು ಸರ್ವಾಧಿಕಾರಿಯಾಗಿ ವರ್ತಿಸಿದನು. ಭರವಸೆಯಿಂದ ದೇವರಿಗಾಗಿ ಕಾಯಲಿಲ್ಲ. ದೇವರು ನಿಧಾನವಾಗಿ ಸಾಗುತ್ತಿದ್ದಾನೆಂದು ಸೌಲನಿಗೆ ತೋರಿತು ಮತ್ತು ಕಾಯ್ದು ಕಾಯ್ದು ಬೇಸರಗೊಂಡನು (ಜ್ಞಾನೋಕ್ತಿ 30:8, 9).

ತನ್ನ ತಪ್ಪುಗಳಿಗೆ ನೆಪ ಹೇಳುವಂತೆ ಸ್ವಾರ್ಥವು ಅವನನ್ನು ನಡೆಸಿತು. 1 ಸಮುವೇಲ 13:11, 12ರಲ್ಲಿ ಹೀಗೆ ಬರೆದಿದೆ:

> ಸಮುವೇಲನು, ಅವನನ್ನು "ಇದೇನು ನೀನು ಮಾಡಿದ್ದು?" ಎಂದು ಕೇಳ ಲು ಅವನು, "ಜನರು ಚದುರಿ ಹೋಗುವದನ್ನೂ ನೀನು ನಿಯಮಿತ ಕಾಲದಲ್ಲಿ ಬಾರದಿರುವದನ್ನೂ ಫಿಲಿಷ್ಟಿಯರು ಮಿಕ್ಮಾಷಿನಲ್ಲಿ ನಮಗೆ ವಿರೋಧವಾಗಿ ಕೂಡಿಕೊಂಡಿರುವದನ್ನೂ ನೋಡಿ, - ನಾನು ಯೆಹೋವನಿಗೆ ಶಾಂತ್ಯರ್ಪಣೆಯನ್ನು ಸಲ್ಲಿಸುವದಕ್ಕಿಂತ ಮೊದಲೇ ಫಿಲಿಷ್ಟಿಯರು ಗಿಲ್ಗಾಲಿಗೆ ಬಂದು ನನ್ನ ಮೇಲೆ ಬಿದ್ದಾರೆಂದು ಭಯಪಟ್ಟು ಸರ್ವಾಂಗಹೋಮವನ್ನು ಸಮರ್ಪಿಸುವದಕ್ಕೆ ಮುಂಗೊಂಡೆನು" ಅಂದನು.

ಒಂದು ರೀತಿಯಲ್ಲಿ ಅವನು ಹೀಗೆ ಹೇಳಿದಂತೆ, "ನನಗೆ ಅದನ್ನು ಮಾಡಲು ಇಷ್ಟವಿರಲಿಲ್ಲ, ಆದರೆ ನಾನು ಅದನ್ನು ತಡೆಯಲಾಗಲಿಲ್ಲ! ಸಂಧರ್ಭಗಳು ನನ್ನನ್ನು ಒತ್ತಾಯಿಸಿದವು!" (Cf 15:19-21; ಮೀಕ 2:2.)

ಸೌಲನ ಸ್ವಾರ್ಥವೇ ಅಮಾಲೇಕ್ಯರನ್ನು ಉಳಿಸಲು ಕಾರಣವಾಯಿತು (15:9). ಅವನು ಉತ್ತಮವಾದದ್ದನ್ನು ಪಡೆಯದಂತೆ ಅವನ ದುರಾಶೆಯು ಒಂದು ರೇಖೆಯನ್ನು ಎಳೆಯಿತು (15:9). ಗಿಲ್ಬೋವ ಬೆಟ್ಟದಲ್ಲಿ ಸೌಲನು ಅಮಾಲೇಕ್ಯನೊಬ್ಬನ ಖಡ್ಗದಿಂದ ಹತನಾದನು! ಸ್ವಾರ್ಥವು ಯಾವಾಗಲೂ ಹಾನಿಯನ್ನುಂಟು ಮಾಡುತ್ತದೆ (ಮತ್ತಾಯ 16:26; ಹಗ್ಗಾಯ 1:6).

ತನ್ನ ಪ್ರಾರಂಭದ ದಿನಗಳಲ್ಲಿ ಸೌಲನು ತನ್ನ ಸ್ವಾರ್ಥವನ್ನು ನಿಯಂತ್ರಿಸಿದ್ದನು. ಆದರೆ ಅದು ಎಷ್ಟು ನಿಧಾನವಾಗಿತ್ತೆಂದರೆ, ನಿಯಂತ್ರಣವು ಕಡಿಮೆಯಾಗಿ ಕೊನೆಯಲ್ಲಿ ಕಳೆದು ಹೋಯಿತು. ನಂತರ ಅವನು ದುರಂತವನ್ನನುಭವಿಸಿದನು! (15:9ಬಿ; ಜ್ಞಾನೋಕ್ತಿ 16:18).

## ಸೌಲನ ಇತಿಹಾಸ: ಅಮೂಲ್ಯವಾದ ಪಾಠಗಳು

ದೇವರಿಗೋಸ್ಕರ "ಕಾಯುವುದು" ಎಷ್ಟು ಪ್ರಾಮುಖ್ಯವಾಗಿದೆ. ಯಾವಾಗಲೂ ವಿಷಯಗಳನ್ನು ನಿಮ್ಮ ಕೈಗಳಲ್ಲಿ ತೆಗೆದುಕೊಳ್ಳಬೇಡಿರಿ.

ದೈವದ್ರೋಹಿಯಾದ ಪಾಲಕನ ಪ್ರಭಾವವು ಬಹು ದುಃಖಕರವಾದದ್ದು ಮತ್ತು ಬಹು ದೂರದವರೆಗೆ ಮುಟ್ಟುವಂತದ್ದಾಗಿದೆ (31:2; 2 ಸಮುವೇಲ 21:1-10). ಸೌಲನ ಕಾರ್ಯಗಳ ನಿಮಿತ್ತವಾಗಿ ಅವನ ಕುಟುಂಬವೇ ಕಷ್ಟಕ್ಕೀಡಾಯಿತು!

ಸದಾಕಾಲಕ್ಕೂ ನೈಜವಾದ ದೈವದ್ರೋಹವು ಎಷ್ಟು ಭಯಂಕರವಾಗಿದೆ (17:11; 18:12; 28:16). ಎಲ್ಲರಿಗೂ ಸರ್ವಸಾಮಾನ್ಯವಾಗಿರುವ ಶೋಧನೆಗಳಿವೆ. ಕೆಲವು ಶೋಧನೆಗಳು ಬಹು ಆಕರ್ಷಕವಾಗಿವೆ, ಆದರೆ ಅದಕ್ಕೆ ಒಳಗಾಗಬಾರದು. ಪ್ರತಿನಿತ್ಯ ನಮ್ಮ ಸ್ವಾರ್ಥವನ್ನು ಕ್ರೂಜೆಗೆ ಹಾಕಬೇಕು.

ಒಬ್ಬ ದೈವ ದ್ರೋಹಿ ವಿಶ್ವಾಸಿಯ ಹೃದಯವು ಎಷ್ಟು ಕಠಿಣವಾಗಿದೆ (24:17). ತೋರಿಕೆಯ ಪಶ್ಚಾತಾಪವು ಸಾಧ್ಯವಿದೆ, ಆದರೆ ಅದು ದುಷ್ಟ ಹೃದಯವನ್ನು ಇನ್ನೂ ಆಳವಾದ ಪಾಪಕ್ಕೆ ನಡೆಸುತ್ತದೆ!

ಸ್ವಾರ್ಥಿಗಳಾಗಿರುವದು ಎಷ್ಟು ಆಕರ್ಷಕವಾಗಿದೆ, ಆದರೆ ಸ್ವಾರ್ಥವು ಎಷ್ಟು ಹಾನಿಕಾರಕ ವಾಗಿದೆ (1 ಕೊರಿಂಥ 10:24; 2 ಕೊರಿಂಥ 5:15ಎ; ಜ್ಞಾನೋಕ್ತಿ 1:19; 15:27).

ನಾವು ಎಲ್ಲ "ಅಮಾಲೇಕ್ಯರನ್ನು" ದೂರವಿರಸಬೇಕು! ತಪ್ಪಿದರೆ ಅವು ನಂತರದ ವರ್ಷಗಳಲ್ಲಿ ಬಂದು ನಮ್ಮನ್ನು ನಾಶಮಾಡುತ್ತವೆ! ಕೊಲೊಸ್ಸೆ 3:5-9 ನಮ್ಮನ್ನು ಹೀಗೆ ಎಚ್ಚರಿಸುತ್ತದೆ:

... ಈಗಲಾದರೋ ಕ್ರೋಧ ಕೋಪ ಮತ್ಸರ ದೂಷಣೆ ಬಾಯಿಂದ ಹೊರಡುವ ದುರ್ಭಾಷೆ ಇವುಗಳನ್ನು ವಿಸರ್ಜಿಸಿಬಿಡಿರಿ. ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು ಪೂರ್ವ ಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನ ಸ್ವಭಾವವನ್ನು ಧರ್ಸಿಕೊಂಡಿದ್ದೀರಲ್ಲವೇ.

## ಮುಕ್ತಾಯ

ಯೋರ್ದನ ಹೊಳೆಯ ಪ್ರವಾಹದಿಂದಾಗಿ ಬುಡ ಮೇಲಾಗಿ ಉಪ್ಪು ನೀರಿನಲ್ಲಿ ಸೆಳೆದೊಯಲ್ಪಟ್ಟ ಉತ್ತಮವಾದ ಮರಗಳ ಅವಶೇಷಗಳು ಮೃತ ಸಮುದ್ರದ ದಂಡೆಯ ಮೇಲೆ ಬಿದ್ದಿರುತ್ತವೆ. ಫಲ ಬಿಡುವದಕ್ಕೂ ಮತ್ತು ನೆರಳುಕೊಡುವದಕ್ಕೂ ದೇವರಿಂದ ನೆಡಲ್ಪಟ್ಟ ಮರಗಳು ತಮ್ಮ ಮೂಲ ಉದ್ದೇಶವನ್ನು ನೆರವೇರಿಸಲು ವಿಫಲವಾದದ್ದನ್ನು ಈ ಮರಗಳನ್ನು ನೆನಪಿಸುತ್ತವೆ. ಅವು ಸತ್ತು ಹೋಗಿವೆ ಮತ್ತು ವ್ಯರ್ಥವಾಗಿವೆ. ಇದಕ್ಕಿಂತಲು ದುಃಖಕರವಾದ ಜೀವತದ ಯಾದಿಯನ್ನು ಪರಿಶೀಲಿಸಿದರೆ, ಸೌಲನು ಅದರಲ್ಲಿ ಪ್ರಮುಖನಾಗುತ್ತಾನೆ!

ಸೌಲನ ಆಳ್ವಿಕೆ ಉತ್ತಮವಾಗಿ ಪ್ರಾರಂಭವಾಯಿತು. ಆದರೆ ಸ್ವಾರ್ಥವು ಅವನನ್ನು ಹಠಕ್ಕೆ ಅವಿಧೇಯತೆಗೆ ಮತ್ತು ಹೆಮ್ಮೆಗೆ ನಡೆಸಿತು. ಇಂದು ಅವನ ಪರಂಪರೆಯು ನ್ಯಾಯಕ್ಕೆ ಹೆಸರಾದ ರಾಜವಂಶದ ಸ್ಥಾಪಕನಾಗಿ ಇಲ್ಲ. ವಿಭಜಿತವಾದ ಮತ್ತು ಭ್ರಷ್ಟವಾದ ಪರಂಪರೆಗೆ ಅವನ ರಾಜವಂಶ ಹೆಸರಾಗಿದೆ. ಯಥಾರ್ಥವಾದ ಹೃದಯಗಳು ಇದರಿಂದ ಎಚ್ಚರವಹಿಸಬೇಕು. ಸೌಲ ತಪ್ಪುಗಳನ್ನು ಹಂಚಿಕೊಂಡು, ಅವನು ಸೋತ ವಿಷಯಗಳಲ್ಲಿ ಗೆಲ್ಲುವ ಆಲೋಚನೆ ಮಾಡುವ ಎಲ್ಲರಿಗೂ ಗಿಲ್ಬೋವದ ಕಣವು ಕಾದಿದೆ! (1 ಕೊರಿಂಥ 10:12).